Government is going to change the plan. They have already changed the plan and the river Vedaganga will take water through Agmapur stream. Whether the Government knows about it. Whether the Government has any idea about the change of the plan. Is it not against the Inter-State water agreement?

ಶ್ರೀ ಎಸ್. ಎಂ. ಕೃಷ್ಣ:– ಮಾನ್ಯ ಅಧ್ಯಕ್ಷರೆ, ಈ ಯೋಜನೆ ಕರ್ನಾಟಕ ಮತ್ತು ಮಹಾರಾಷ್ಟ್ರ ಸರ್ಕಾರದ ಜಂಟಿ ಯೋಜನೆಯಾಗಿದೆ. ಈ ಯೋಜನೆಯನ್ನು ಮಹಾರಾಷ್ಟ್ರ ಸರ್ಕಾರದವರು ಕಾರ್ಯರೂಪಕ್ಕೆ ತರತಕ್ಕಂಥಾದ್ದು, ಕರ್ನಾಟಕ ಸರ್ಕಾರ ಅವರಿಗೆ ಹಣವನ್ನು ಕೊಡತಕ್ಕಂಥಾದ್ದು. ಈಗಿನ ವರದಿಗಳ ಪ್ರಕಾರ 9ನೇ ಪಂಚವಾರ್ಷಿಕ ಯೋಜನೆ ಹೊತ್ತಿಗೆ ಕರ್ನಾಟಕದ ಚಿಕ್ಕೋಡಿ ತಾಲ್ಲೂಕಿನಲ್ಲಿ ಇದರಿಂದ ನೀರಾವರಿಯಾಗಬಹುದೆನ್ನತಕ್ಕಂಥ ಆಶಯವಿದೆ.

SRI SUBHAS S. JOSHI:– But, they have not answered, whether river Vedaganga will get water. They said 'No'. But, according to the plan, the river Vedaganga will also get water after the completion of the project which is already completed. Only because of the lack of canals, the Karnataka is not getting water. Karnataka is completing the canal portion. It has already started. Whether the Government wants to pressurise the Government of Maharashtra to dig canals?

ಶ್ರೀ ಎಸ್. ಎಂ. ಕೃಷ್ಣ:– ಕಾಲುವೆಗಳನ್ನು ಮಾಡಬೇಕೆಂದು ಈ ಬಗ್ಗೆ ನಾವು ಮಹಾರಾಷ್ಟ್ರ ಸರ್ಕಾರದ ಮೇಲೆ ಆಗಿಂದಾಗ್ಗೆ ಒತ್ತಾಯ ತರುತ್ತಿದ್ದೇವೆ. 1979ರ ಅಂದಾಜಿನ ಪ್ರಕಾರ ಈ ಯೋಜನೆಯ ಒಟ್ಟು ವೆಚ್ಚ 94.54 ಕೋಟಿ ರೂಪಾಯಿಗಳು. ಅದರಲ್ಲಿ ಕರ್ನಾಟಕದ ಪಾಲು ಸುಮಾರು 26 ಕೋಟಿ ರೂಪಾಯಿಗಳು. ಇದುವರೆಗೆ ನಾವು ಅವರಿಗೆ ಕೊಟ್ಟಿರತಕ್ಕಂಥ ಹಣ ಕೇವಲ 4 ಕೋಟಿ ರೂಪಾಯಿಗಳು.

ಮಾನ್ಯ ಸದಸ್ಯರು ಇದರಿಂದಲೇ ಅರ್ಥ ಮಾಡಿಕೊಳ್ಳಬಹುದು. ನಾವು ಈಗ 8ನೇ ಪಂಚವಾರ್ಷಿಕ ಯೋಜನೆಯ ಪ್ರಥಮ ವರ್ಷದಲ್ಲಿದ್ದೇವೆ. ನಮ್ಮ ಅಂದಾಜಿನ ಪ್ರಕಾರ ಕೆಲಸವಾಗುತ್ತಿರುವ ಗತಿಯನ್ನು ನೋಡಿದರೆ ಬಹುಶಃ 9ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ನೀರು ಸಿಕ್ಕಬಹುದು.

ಕೆಂಗೇರಿ – ಚಿಕ್ಕ ಬಾಣಾವರ ರೈಲ್ವೆಗೇಟಿನ ಬಳಿ ಮೇಲು ಸೇತುವೆ ನಿರ್ಮಾಣ

362 (2040): ಶ್ರೀ ಎಸ್. ರಮೇಶ್ (ಉತ್ತರಹಳ್ಳಿ):–

ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೆಂಗೇರಿ - ಚಿಕ್ಕ ಬಾಣಾವರ ರೈಲ್ವೆ ಗೇಟಿನ ಬಳಿ ಸೇತುವೆ ಇಲ್ಲದ್ದು ಪಾದಚಾರಿಗಳಿಗೆ ಹಾಗೂ ವಾಹನ ಸಂಚಾರಕ್ಕೆ ಅಡ್ಡಿಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಇಲ್ಲಿ ಓವರ್ ಬ್ರಿಡ್ಜ್ ನಿರ್ಮಾಣದ ಅಗತ್ಯವಿರುವುದು ನಿಜವಲ್ಲವೆ ?

ಇ) ಹಾಗಿದ್ದಲ್ಲಿ, ಸರ್ಕಾರದವರು ಕೂಡಲೇ ಈ ಬಗ್ಗೆ ಕ್ರಮ ಕೈಗೊಂಡು ಓವರ್ ಬ್ರಿಡ್ಜ್ ನಿರ್ಮಾಣವನ್ನು ಕೈಗೊಳ್ಳುವರೇ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):-

ಅ) ಬಂದಿದೆ.

ಆ) ಅವಶ್ಯಕತೆ ಇಲ್ಲವೆಂದು ಕಂಡು ಬಂದಿರುತ್ತದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಸ್. ರಮೇಶ್:- ಮಾನ್ಯ ಅಧ್ಯಕ್ಷರೇ, ಕೆಂಗೇರಿ ಮತ್ತು ಚಿಕ್ಕಬಾಣಾವರ ಈ ಎರಡು ಸ್ಥಳಗಳಲ್ಲಿ ರೈಲ್ವೆ ಗೇಟುಗಳಿವೆ. ಆ ರೈಲ್ವೆ ಗೇಟನ್ನು ತೆಗೆಯಬೇಕು, ಇಲ್ಲದಿದ್ದರೆ ಅಲ್ಲಿ ಒಂದು ಓವರ್ ಬ್ರಿಡ್ಜನ್ನು ಮಾಡಬೇಕೆಂದು ಬಹಳ ಹಿಂದಿನಿಂದಲೂ ರೈತರು ಹೋರಾಟ ಮಾಡುತ್ತಲೇ ಇದ್ದಾರೆ. ರೈಲುಗಳನ್ನು ನಿಲ್ಲಿಸಿದ್ದಾರೆ. ಮೇಲ್ಗಡೆ ಕೆಂಗೇರಿ ಸ್ಯಾಟಲೈಟ್ ಟೌನ್‌ನಲ್ಲಿ ಸುಮಾರು 5000 ಮನೆಗಳಿವೆ. ಅದೇ ರೀತಿ ಕೆಳಗಡೆ ಗ್ರಾಮದಲ್ಲಿ ಸುಮಾರು 25000 ದಿಂದ 50000 ಜನರಿದ್ದಾರೆ. ಹಿಂದೆ ಯಾವುದೋ ಒಂದು ಆಧಾರದ ಮೇಲೆ ಈ ಉತ್ತರ ಕೊಟ್ಟಿದ್ದಾರೆ. ಆದರೆ ಕಳೆದ 6 ತಿಂಗಳಿಂದ ಅನೇಕ ಬಡ ಜನರು ಹೋರಾಟ ಮಾಡಿದ್ದಾರೆ. ರೈಲು ನಿಲ್ಲಿಸಿದ್ದಾರೆ, ರಸ್ತೆ ತಡೆ ಹಾಕಿದ್ದಾರೆ. ಕೇವಲ ಒಂದು ರೈಲ್ವೆ ಗೇಟನ್ನು ತೆಗೆಸುವ ಸಲುವಾಗಿ ನಮ್ಮ ಪ್ರಜಾಪ್ರಭುತ್ವದಲ್ಲಿ ಇಷ್ಟೊಂದು ಮೊಡ್ಡ ಹೋರಾಟದ ಅವಶ್ಯಕತೆ ಇದೆಯೇ! ತಾವು ಹಿರಿಯರು. ಈ ಕೂಡಲೇ ನಿಮ್ಮ ಅಧಿಕಾರಿಗಳ ಒಂದು ತಂಡವನ್ನು ಅಲ್ಲಿಗೆ ಕಳುಹಿಸಿ ಪರೀಕ್ಷೆ ಮಾಡಿಸಿ ವರದಿ ತರಿಸಿಕೊಳ್ಳಬಹುದು. ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ ಕೂಡಲೇ ತಾವೇ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂದು ನನ್ನ ಭಾವನೆ. ಯಾವುದೋ ಓಬಿರಾಯನ ಕಾಲದಲ್ಲಿ ಹೋಗಿ ನೋಡಿಕೊಂಡು ಬಂದು ಕೊಟ್ಟಿರುವ ಉತ್ತರವೆಂದು ಅನಿಸುತ್ತದೆ. ಇತ್ತೀಚೆಗೆ ನಿಮ್ಮ ಅಧಿಕಾರಿಗಳು ಆ ಸ್ಥಳಕ್ಕೆ ಹೋಗಿದ್ದಿದ್ದರೆ ಈ ರೀತಿಯ ಉತ್ತರವನ್ನು ಕೊಡುತ್ತಿರಲಿಲ್ಲ ಮತ್ತು ತಮ್ಮಿಂದ ಇದು ಆಗುತ್ತಿರಲಿಲ್ಲವೆಂದು ನನ್ನ ಭಾವನೆ.

ಶ್ರೀ ಕೆ. ಹೆಚ್. ರಂಗನಾಥ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಈ ಓವರ್ ಬ್ರಿಡ್ಜನ್ನು ಮಾಡತಕ್ಕದ್ದು ರೈಲ್ವೆ ಇಲಾಖೆಯವರ ಕೆಲಸ. ಮಾನ್ಯ ಸದಸ್ಯರಿಗೆ ಕೇಂದ್ರ ಸರ್ಕಾರದಲ್ಲಿ ಸಾಕಷ್ಟು ಪ್ರಭಾವ ಇದೆ. ಅವರು ಈ ಕೆಲಸವನ್ನು ಜಾಗ್ರತೆ ಮಾಡಿಸುವುದಾದರೆ ಇದಕ್ಕೆ ನಾನು ಅಡ್ಡ ಬರುವುದಿಲ್ಲ. ಆ ಬಡಪಾಯಿಗಳು ಇಲ್ಲಿ ಹೋರಾಟ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಸರ್ಕಾರ ಇದಕ್ಕೆ ವಿರೋಧವಾಗಿಲ್ಲ. ಸರ್ಕಾರ ಇದರ ಬಗ್ಗೆ ಒತ್ತಾಯ ಮಾಡುವುದಕ್ಕೆ ಕಾರಣವೇನೆಂದರೆ, ಅಲ್ಲಿ 500 ಅಡಿಯೊಳಗೆ ಇನ್ನೊಂದು ಓವರ್ ಬ್ರಿಡ್ಜ್ ಇರುವುದರಿಂದ ಇದನ್ನು ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ರೈತರು ಕೇಳುವ ರೀತಿಯಲ್ಲಿ ಅಲ್ಲಿ ಗೇಟಿನ ಅವಶ್ಯಕತೆ ಇದೆ. ಅದು ಲೆವೆಲ್ ಕ್ರಾಸಿಂಗ್ ಆದ್ದರಿಂದ ಮತ್ತು ಆ ಗೇಟ್‌ನಲ್ಲಿ ಯಾವ ವಾಚ್‌ಮನ್ನೂ ಇಲ್ಲದೇ ಇರುವುದರಿಂದ ಅಲ್ಲಿ ಅಕಸ್ಮಿಕಗಳು ಯಾವ ಸಂದರ್ಭದಲ್ಲಿ ಬೇಕಾದರೂ ಆಗಬಹುದು. ಅದನ್ನು ಹೇಳುವುದಕ್ಕಾಗುವುದಿಲ್ಲ. ಅಲ್ಲಿ ಗೇಟಿನ ಅವಶ್ಯಕತೆ ಇದ್ದರೂ ಕೂಡ ಕೇವಲ 500 ಅಡಿ ಅಂತರದಲ್ಲಿ ಇನ್ನೊಂದು ಬ್ರಿಡ್ಜ್ ಇರುವುದರಿಂದ ಈ ಕೆಲಸವನ್ನು ಮಾಡುವಂತೆ ರಾಜ್ಯ ಸರ್ಕಾರ ಹೆಚ್ಚು ಒತ್ತಾಯ ಹಾಕುವುದಕ್ಕೆ ಸಾಧ್ಯವಾಗುತ್ತಿಲ್ಲ. ಮಾನ್ಯ ಸದಸ್ಯರು ಕೇಂದ್ರದ ಮೇಲೆ ಒತ್ತಾಯ ತಂದು ಮಾಡಿಸುವುದಾದರೆ ಬಹಳ ಒಳ್ಳೆಯದು. ಅದಕ್ಕೆ ನನ್ನ ಬೆಂಬಲ ಇದೆ.

ಶ್ರೀ ಎಸ್. ರಮೇಶ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸಚಿವರ ಸಲಹೆ ಬಹಳ ಚೆನ್ನಾಗಿದೆ. ಆದರೆ ಅವರಿಗೆ ನಾನು ಒಂದು ವಿಚಾರವನ್ನು ಜ್ಞಾಪಿಸುವುದು ನನ್ನ ಧರ್ಮವೆಂದು ತಿಳಿದಿದ್ದೇನೆ. ಬಹುಶಃ ಅವರು ಮರೆತಿರಬಹುದು. ರಾಜ್ಯ ಸರ್ಕಾರದಿಂದ ಈ ಕೆಲಸಕ್ಕೆ ಒಂದು ಭಾಗ ಹಣವನ್ನು

ಕೊಡಬೇಕಾಗುತ್ತದೆ. ಅಥವಾ ಆ ಗೇಟ್‌ನಲ್ಲಿ ಒಬ್ಬ ವಾಚ್‌ಮನ್‌ನನ್ನು ಅವರು ಹಾಕುವುದಾದರೆ ಅತನ ಖರ್ಚನ್ನು ನಾವು ನಮ್ಮ ಸರ್ಕಾರದ ವತಿಯಿಂದ ಭರಿಸಬೇಕಾಗುತ್ತದೆ. ಸಾರ್ವಜನಿಕ ಹಿತದೃಷ್ಟಿಯಿಂದ ತಾವು ದೊಡ್ಡ ಮನಸ್ಸು ಮಾಡಿ ಇಲಾಖೆಯ ವತಿಯಿಂದಲೇ ಈ ಕೆಲಸವನ್ನು ತೆಗೆದುಕೊಳ್ಳಬೇಕು. ಇದಕ್ಕೆ ಸಂಬಂಧಪಟ್ಟ ರೈಲ್ವೆ ಅಧಿಕಾರಿಗಳ ಜೊತೆ ನಾನು ಈಗಾಗಲೇ ಮಾತನಾಡಿದ್ದೇನೆ. ಕೇಂದ್ರದ ರೈಲ್ವೆ ಮಂತ್ರಿಗಳಾದ ಮಾನ್ಯ ಜಾಫರ್ ಷರೀಫ್‌ರವರ ಗಮನಕ್ಕೆ ನಾವು ಇದನ್ನು ಪದೇ ಪದೇ ತೆಗೆದುಕೊಂಡು ಹೋದಾಗ ಅವರು ಒಂದೇ ಮಾತಿನಲ್ಲಿ ಏನು ಹೇಳಿದರೆಂದರೆ, ತಮ್ಮ ಸರ್ಕಾರದ ಪಿ.ಡಬ್ಲ್ಯು.ಡಿ.ನಿಂದ ಒಪ್ಪಿಕೊಳ್ಳುವುದಾದರೆ ನಾನು ಈ ಕೆಲಸವನ್ನು ಮಾಡಿಸಿಕೊಡುತ್ತೇನೆಂದು ಹೇಳಿದರು. ಇದು ಕೆಂಗೇರಿಗೆ ಸೇರಿದಂಥ ಗೇಟಿನ ಬಗ್ಗೆ. ಇನ್ನೊಂದು ಚಿಕ್ಕ ಬಾಣಾವರಕ್ಕೆ ಸೇರಿದ ಗೇಟು. ಅಲ್ಲಿ ಸುತ್ತಮುತ್ತ ಯಾವ ಬ್ರಿಡ್ಜೂ ಕೂಡ ಇಲ್ಲ. ನಿಜವಾಗಿ ಹೇಳುವುದಾದರೆ ಸುಮಾರು ವಾಹನಗಳು ಆ ಲೆವಲ್ ಕ್ರಾಸಿಂಗ್‌ನಲ್ಲಿ ಆಕಸ್ಮಿಕಕ್ಕೆ ಒಳಗಾಗಿ ಅನೇಕ ಸಂಸಾರಗಳಿಗೆ ತೊಂದರೆಯಾಗುತ್ತಿದೆ. ಇದೇ ರೀತಿ ಅನೇಕ ಜಾನುವಾರಗಳಿಗೂ ತೊಂದರೆಯಾಗುತ್ತಿದೆ. ಅಲ್ಲಿ ಸುತ್ತಮುತ್ತ ರೈತರಿದ್ದು ಅವರು ಓಡಾಡುವುದಕ್ಕೆ ಜಾಗವಿಲ್ಲ. ಆದುದರಿಂದ ಈ ಚಿಕ್ಕ ಬಾಣಾವರದ ಗೇಟಿನ ಕೆಲಸವನ್ನು ತಾವು ಮಾಡಿಸುವುದಲ್ಲದೆ, ಕೆಂಗೇರಿ ಗೇಟಿನ ಬಗ್ಗೆ ಕೂಡ ದೊಡ್ಡ ಮನಸ್ಸು ಮಾಡಿ ಇಲಾಖೆಯ ವತಿಯಿಂದ ಹಣವನ್ನು ಏನಾದರೂ ಕೊಟ್ಟಿದ್ದೇ ಆದರೆ ಆ ಕೆಲಸವನ್ನು ಮಾಡಿಸಲು ರೈಲ್ವೆಯವರು ಮುಂದೆ ಬರುತ್ತಾರೆ.

ಶ್ರೀ ಕೆ. ಹೆಚ್. ರಂಗನಾಥ್:– ಇದು ಮನುಷ್ಯ ರಹಿತ ಗೇಟ್. ಅಲ್ಲಿ ಯಾರೂ ಇರಬೇಕಾಗಿಲ್ಲ ಎಂದು ಹಿಂದೆ ಯಾವುದೋ ಕಾಲದಲ್ಲಿ ಮಾಡಿದ್ದರು. ಆದರೂ ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಪ್ರಸ್ತಾಪ ಮಾಡಿ ನೋಡುತ್ತೇನೆ. ಈ ಖರ್ಚನ್ನು ಭರಿಸುವುದಕ್ಕೆ ಅವಕಾಶವಿದ್ದರೆ ಅದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಸ್. ರಮೇಶ್:– ಈಗಾಗಲೇ ಆ ಭಾಗದ ಜನರು ಇದರ ಬಗ್ಗೆ ಒಂದು ದೊಡ್ಡ ಹೋರಾಟವನ್ನು ಮಾಡಲು ದಿನಾಂಕವನ್ನು ನಿಗದಿ ಮಾಡಿದ್ದಾರೆ. ಅದಕ್ಕೆ ನಾವೂ, ನೀವೂ ಅವಕಾಶವನ್ನು ಕೊಡುವುದು ಬೇಡ. ಏಕೆಂದರೆ ಅಲ್ಲಿ ಸುತ್ತ ದೊಡ್ಡ ಲೇಔಟ್ ಇದೆ. ಅದರ ಮಧ್ಯದಲ್ಲಿ ರೈತರು ಇದ್ದಾರೆ. ಆ ರೈತರಿಗೆ ತೊಂದರೆ ಆಗುವುದಕ್ಕೆ ನಾವು ಅವಕಾಶ ಕೊಡುವುದು ಬೇಡ. ಅವರು ತಮ್ಮ ಎತ್ತಿನ ಗಾಡಿಗಳನ್ನು ರಸ್ತೆಗೆ ತಂದು ನಿಲ್ಲಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ನಾವು ಅವಕಾಶ ಕೊಡದೆ ತಾವು ಒಂದು ಅಧಿಕಾರಿಗಳ ತಂಡವನ್ನು ಕಳುಹಿಸಿದರೆ, ಇಲ್ಲಿ ಒಂದು ಸರ್ಕಾರ ಇದೆ, ಕ್ರಮ ತೆಗೆದುಕೊಳ್ಳುತ್ತಿದೆ ಎಂದು ಗೊತ್ತಾಗುತ್ತದೆ. ಅವರಿಗೂ ಒಂದು ಖಾತ್ರಿಯಾಗುತ್ತದೆ. ಸುಮಾರು 8-10 ವರ್ಷಗಳಿಂದ ಈ ಸಮಸ್ಯೆ ಹಾಗೆಯೇ ಇದೆ. ಈಗ ತಮ್ಮ ಕಾಲದಲ್ಲಾದರೂ ಇದು ಪರಿಹಾರವಾಗಲೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕೈಗಾರಿಕೆಗಳು ಹಾಗೂ ಬಳಕೆದಾರರಿಂದ ವಿದ್ಯುತ್ ಬಾಕಿ

364 (1544): ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಾ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಒಂದು ಲಕ್ಷ ರೂಪಾಯಿಗಳಿಗೂ ಮೀರಿ ವಿದ್ಯುತ್ ಬಾಕಿಯನ್ನು ಉಳಿಸಿಕೊಂಡಿರುವ ಕೈಗಾರಿಕೆಗಳು ಹಾಗೂ ಇತರೆ ಬಳಕೆದಾರರುಗಳ ವಿವರಗಳೇನು ?

ಆ) ವಿದ್ಯುತ್ ಬಾಕಿಯನ್ನು ವಸೂಲಿ ಮಾಡದಿರಲು ಕಾರಣವೇನು ?